# ಶ್ರಾವಣ ಸಂಭ್ರಮ

ಗಿಡದಲ್ಲಿ ಹೊಸ ಹೂವುಗಳು ಅರಳುವುದಕ್ಕೆ, ನೀರಿನಲ್ಲಿ ಹೊಸ ಅಲೆಗಳು ಏಳುವುದಕ್ಕೆ, ನವಿಲಿಗೆ ಹೊಸ ಗರಿಗಳು ಮೂಡುವುದಕ್ಕೆ ವಿಶೇಷ ಕಾರಣಗಳೇನೂ ಇರಬೇಕಿಲ್ಲ. ಗಿಡವೂ, ನೀರೂ, ನವಿಲೂ ಜೀವಂತಿಕೆಯಿಂದ ನಳನಳಿಸಲು ಹೊಸದು ಹಾಗೆ ಮೂಡಲೇ ಬೇಕು. ಹೊಸತಿನ ಹಂಬಲವೇ ಇವೆಲ್ಲದರ ಇರುವಿಕೆಗೆ ಬೆಂಬಲ. ಹಾಗೆ ನೋಡಿದರೆ ಬದುಕಿನಲ್ಲಿ ಯಾವುದೂ ಶಾಶ್ವತವಲ್ಲ, ಹೊಸದಾಗಿ ಹುಟ್ಟುವುದು ಬಿಟ್ಟು.

ನಿಮ್ಮ 'ಮಯೂರ'ದ ಲಾಸ್ಯ ಆರಂಭವಾಗಿ ನಲವತ್ತೈದು ವರ್ಷ ಆಯಿತು; ಆದರೆ ಕಾಲಕಾಲಕ್ಕೆ ಅದು ಇಡುತ್ತಿರುವ ಹೆಜ್ಜೆಗಳೋ ಇದೇ ಮೊದಲೆಂಬಂತೆ ಹೊಸತು. ಹೊಸ ಕಾರ್ಮುಗಿಲು, ಹೊಸ ಮಳೆಹನಿ, ಹೊಸ ನವಿಲಜಾಗರ.



ಆಷಾಢದ ಮಳೆಯಲ್ಲಿ ಮಿಂದ ಇಳೆಗೆ ಶ್ರಾವಣದ ಹೊಸ ಕಳೆ. ಹಾಗೆ 'ಮಯೂರ'ಕ್ಕೂ ಹೊಸ ಗರಿಗಳ ಸಿಂಗಾರ. ಅದರ ಕುಣಿತಕ್ಕೆ ಹೊಸ ಹೆಜ್ಜೆಗಳು. ಮೊದಲಿಗೆ ಆಗಸ್ಟ್ ತಿಂಗಳು ಬಂದೊಡನೆ ಸ್ವಾತಂತ್ರ್ಯೋತ್ಸವದ ಸಡಗರದ ಜೊತೆಗೆ 'ನೆನೆ ನೆನೆ ಆ ದಿನವ' ಎಂಬಂತೆ ಹೋರಾಟದ ದಿನಗಳು ನೆನಪಾಗುತ್ತವೆ. ಆದ್ದರಿಂದಲೇ 'ಸ್ವಾತಂತ್ರ್ಯ ಸ್ಮೃತಿ ಸಂಚಯ'ದಲ್ಲಿ ಪರಕೀಯರ ಕ್ರೌರ್ಯದ ವಿರುದ್ಧ ಗುರುದೇವ ರವೀಂದ್ರರು ತೀವ್ರವಾಗಿ ಸ್ಪಂದಿಸಿದ ಒಂದು ಸಂದರ್ಭವನ್ನು ನೆನಪಿಸಿಕೊಳ್ಳಲಾಗಿದೆ. ಆ ದಿನಗಳಲ್ಲಿ ಕನ್ನಡದ ಮೂವರು ಮುಖ್ಯ ಕವಿಗಳು ಬರೆದ ಕವಿತೆಗಳನ್ನು ಮತ್ತೊಮ್ಮೆ ಓದುವುದು ನಮ್ಮ ಸ್ವಾತಂತ್ರ್ಯ ದಿನಾಚರಣೆಗೆ ಹೊಸಹುರುಪು ತುಂಬದಿರುತ್ತದೆಯೆ? ನಿನ್ನೆಯ ನೆನಪಿಲ್ಲದೆ ನಾಳೆಗೆ ಹೊರಳುವುದಾದರೂ ಹೇಗೆ?

ಹಾಗೆಯೇ ಸಾಂಸ್ಕೃತಿಕ ರಂಗದಲ್ಲಿ ಹೊಸ ಹೊಳಹುಗಳನ್ನು ಸೂಸುವ ವಾಗ್ವಾದಗಳು ಸದಾ ಅರಳುತ್ತಿರಬೇಕು. ನಮ್ಮ ಕಾಲದ ತವಕ ತಲ್ಲಣ ತಳಮಳಗಳ ವಿಶ್ಲೇಷಣೆ, ವ್ಯಾಖ್ಯಾನ ಆಗುತ್ತಿರಬೇಕು. ಅದಕ್ಕೆಂದೇ ರೂಪಿಸಲಾದ 'ವೇದಿಕೆ'ಗೆ ನಾಡಿನ ಚಿಂತಕರಿಗೆಲ್ಲ ಸುಸ್ವಾಗತ. ಇನ್ನು ನವ್ಯ ಕಾವ್ಯ ಚಳವಳಿಯ ಉಚ್ಛ್ರಾಯ ದಿನಗಳ ತಮ್ಮ 'ಒಡನಾಟ'ದ ನೆನಪುಗಳನ್ನು ಪ್ರಮುಖ ಕವಿಯೊಬ್ಬರು ಹಂಚಿಕೊಳ್ಳಲಿದ್ದಾರೆ. ಬಹುಭಾಷಾ ಸರಸ್ವತಿಯಾದ ನಮ್ಮ ತಾಯಿ ಭಾರತಿಯ ಅಂಗಳದಲ್ಲಿ ಕೇಳುವ ಸವಿನುಡಿಗಳ ಬಗ್ಗೆ ತಿಳಿಸುವ 'ಕನಿಮೊಳಿ' ಅಂಕಣವಂತೂ ಭಾರತೀಯ ಪತ್ರಿಕೋದ್ಯಮದಲ್ಲೇ ಹೊಸತು.

'ಸಖಿ ನಿನ್ನ ಸಖ್ಯದ ಆಖ್ಯಾನ ಕಟುಮಧುರ' ಎಂದರು ವರಕವಿ ಬೇಂದ್ರೆ. ನಮ್ಮ 'ಸಖೀಗೀತ'ದಲ್ಲಿ ಹಲವಾರು ಸಾಧಕರು ತಮ್ಮ ಬಾಳಸಂಗಾತಿಯನ್ನು ಕುರಿತು ಹೇಳಲಿದ್ದಾರೆ. ಇದು ಹೆಣ್ಣಿನ ಕೊಡುಗೆಗೆ ನಾವು ಸಮಾಜದ ಪರವಾಗಿ ಹೇಳುವ ಧನ್ಯವಾದ. 'ಜೀವನಜೋಕಾಲಿ'ಯಲ್ಲಿ ಜೀಕುತ್ತ ನಮ್ಮ ಜನಪದ ಸಾಹಿತ್ಯದ ಸ್ವಾರಸ್ಯಗಳನ್ನು ಮೆಲುಕು ಹಾಕಬಹುದು. 'ನುಡಿ–ಚಿತ್ರ' ಕನ್ನಡ ಸಂಸ್ಕೃತಿಯನ್ನು ಕಟ್ಟಿದ ಪ್ರಾತಃಸ್ಮರಣೀಯರಿಗೆ ನಾವು ಸಲ್ಲಿಸುವ ನಮನ. ಮಕ್ಕಳ ಕುತೂಹಲ ಕೆರಳಿಸುವ ಹಕ್ಕಿಗಳನ್ನು 'ಪಕ್ಷಿ–ನೋಟ' ಪರಿಚಯಿಸುತ್ತದೆ. ಹೊಸ ತಂತ್ರಜ್ಞಾನವನ್ನು ಕುರಿತ ನಮ್ಮನಿಮ್ಮೆಲ್ಲರ ಹಸಿವನ್ನು 'ಸೈಬರ್ ಕೆಫೆ' ತಣಿಸುತ್ತದೆ. ಇಂದಿಗೆ ಇಷ್ಟು ಹೊಸ ಅಂಕಣಗಳು. ನಮಗಿರುವ ಹಾಗೆ ಹೊಸ ಗರಿಗಳಿಗೂ ನಾಳೆಗಳಿವೆ!

ಗರಿಮುರಿ ಹೊಸ ಗರಿಗಳ ಶ್ರಾವಣ ಸಡಗರದಲ್ಲಿರುವ 'ಮಯೂರ'ವನ್ನು ಬರಮಾಡಿಕೊಳ್ಳಿ– ನಿಮ್ಮ ಮನೆಯಂಗಳಕೆ, ಮನದಂಗಳಕೆ.

● ಆರ್. ಪೂರ್ಣಿಮಾ